doc-399
T-P-2

R No KKNN 12 ಶ 13 - 11 - 1974

in ★ ★ ★ ★ ★
58 th Year
ನೇ ವರ್ಷ

ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

ಸತ್ಯವಾದಿ
SATYAVADI

Golden Jubilee
Celebrated Paper
Satyavadi Daily
Mysore 4
- For Influential Publicity -

ಪ್ರಕಾಶಕರು: ಅರಮನೆ ಸಿರಸ್ತೇದಾರ್ ಎಂ. ಪಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ (3 ಪುಟ)

Deepavali Greetings to all ❁ ಸಕಲರಿಗೂ ದೀಪಾವಳಿ ಶುಭಾಶಯಗಳು

ಜೈನ ಧರ್ಮ

ಲೇಖಕರು– ಸುನೀತಾ ಸುರೇಶ್

ಜೈನ ಧರ್ಮ ಅನಾದಿಯಾದ ಸಂಪೂರ್ಣ ಸ್ವತಂತ್ರವಾದ ಧರ್ಮ ; ಇದು ಹಿಂದೂ ಧರ್ಮದ ಭಾಗವಲ್ಲ ; ಇವನ್ನು ಸ್ಥಾಪಿಸಿದರೆಂಬ ತಪ್ಪು ತಿಳುವಳಿಕೆ ಜನರಲ್ಲಿದೆ. ಆದರೆ ಶ್ರೀ ಮಹಾವೀರರಿಗಿಂತಲೂ ಮೊದಲು 23 ಜನ ತೀರ್ಥಂಕರರು ಆಗಿ ಹೋದರು ; ಮಹಾವೀರರು 24 ನೇ ತೀರ್ಥಂಕರರು ; ಇವರಿಗೆ " ಜಿನ " ಎಂದೂ ಹೇಳುತ್ತಾರೆ ; ಜಿನ ಎಂದರೆ ಜನ್ಮ ಮರಣ ರೋಗಾದಿಗಳನ್ನೂ ಅಂದರೆ ರಾಗದ್ವೇಷಗಳನ್ನು ಜಯಿಸಿದವನು ಎಂದೂ ಅರ್ಥ. ಜಿನನ ತತ್ವಗಳನ್ನು ಅನುಸರಿಸುವವರೇ ಜೈನರು; ಇವರು ಪರಮತಕ್ಕೆ ಎಂದೂ ತೊಂದರೆ ಮಾಡಿದವರಲ್ಲ. ಜೈನರ ದೇವಸ್ಥಾನಕ್ಕೆ ಬಸದಿ ಎನ್ನುವರು ; ಇಲ್ಲಿ ಸರ್ವಸಂಗ ಪರಿತ್ಯಾಗಿಯಾದ ಜಿನನ ಬಿಂಬ ಇರುತ್ತದೆ ; ಈ ಬಿಂಬಗಳು ಸ್ತ್ರೀ, ವಸ್ತ್ರ, ಇತ್ಯಾದಿ ಎಲ್ಲಾ ಪರಿಗ್ರಹಗಳನ್ನೂ ಬಿಟ್ಟು ಧ್ಯಾನದಲ್ಲಿ ಲೀನನಾಗಿರುತ್ತದೆ ; ಜೈನರು ಹಾಲು, ಗಂಧ ಇತ್ಯಾದಿ ಶುದ್ಧ ವಸ್ತುಗಳಿಂದ ಈ ಬಿಂಬಗಳನ್ನು ಪೂಜಿಸುತ್ತಾರೆ ; ಇಂತಹ ಜಿನರನ್ನು ಪೂಜಿಸುವವರಿಗೆ ಶಾಂತಿ ದೊರೆಯುವುದರಲ್ಲಿ ಸಂದೇಹವಿಲ್ಲ.

ಅಹಿಂಸೆ ಇವರ ಮುಖ್ಯ ತತ್ವ ; ಧರ್ಮದ ಹೆಸರಿನಿಂದ ಮಾಡುವ ಯಾಗ, ಬಲಿ ಇತ್ಯಾ ಕೂಡ ಇವರ ದೃಷ್ಟಿಯಲ್ಲಿ ಹಿಂಸೆ ಆಗುತ್ತದೆ ; ಮಾಂಸ, ಮದ್ಯ ಮದ್ಯ ಇತ್ಯಾದಿ ಅಮಲುಂಟು ಮಾಡುವ ಪದಾರ್ಥಗಳನ್ನು ಸೇವಿಸುವುದನ್ನು ವಿರೋಧಿಸುತ್ತದೆ ; ರಾತ್ರಿ ಭೋಜನ ನಿಷಿದ್ಧ ; ಸೂರ್ಯನ ಬೆಳಕಿಲ್ಲದ್ದರಿಂದ ರಾತ್ರಿ ಸೂಕ್ಷ್ಮ ಜಂತುಗಳು ಕೈಗೆ ಸಿಕ್ಕಿದ್ದೆಲ್ಲವೂ ಇರುತ್ತವೆ. ಇವುಗಳಿಗೆ ಹಿಂಸೆ ಆಗಬಾರದು. ತಿಳಿಯದೇ ಭುಜಿಸಲೂಬಹುದೆಂಬುದೆ ಇದಕ್ಕೆ ಕಾರಣ ; ನೀರಿನಲ್ಲಿರುವ ಸೂಕ್ಷ್ಮ ಜೀವಿಗಳಿಗೆ ಹಿಂಸೆ ಆಗದಿರಲು ನೀರನ್ನು ಶೋಧಿಸಿ ಪುನಃ ಆ ಜೀವಿಗಳನ್ನು ಅದೇ ಜಲಾಶಯಕ್ಕೆ ಬಿಡಬೇಕು ; ಜಿನ ಧರ್ಮದ ಪ್ರಕಾರ ಯಾವ ಜೀವಿಗೂ ಮತ್ತೊಂದು ಜೀವಿಯನ್ನು ಹಿಂಸಿಸುವ ಅಧಿಕಾರ ಇರುವುದಿಲ್ಲ.

ಜೈನ ಮುನಿಗಳು ಅನುಸರಿಸಬೇಕಾದ ಆಚಾರ ಬಹಳ ಕಠಿಣವಾದದ್ದು ; ಇವರು ಸಂಸಾರವನ್ನು ತ್ಯಜಿಸಿ ಸರ್ವಸಂಗ ಪರಿತ್ಯಾಗಿಗಳಾಗಿ ದೀಕ್ಷೆ ಪಡೆಯುತ್ತಾರೆ.

ಜೈನರಿಗೆ ಅಷ್ಟಮಿ, ಚತುರ್ದಶಿ, ದಶಲಕ್ಷಣ, ಅಷ್ಟಾಹ್ನಿಕ, ರತ್ನತ್ರಯ, ಪುಷ್ಪಾಂಜಲಿಗಳು ಪವಿತ್ರ ದಿನಗಳು. ಸಮ್ಮೇದ ಶಿಖರ, ಚಂಪಾಪುರ, ಪಾವಾಪುರ, ಶ್ರವಣಬೆಳಗೊಳ, ಗಡಸಂಥ, ವಾಕಾಂಗೀತುಂಗಿ, ಸೋನಾಗಿರಿ ಇತ್ಯಾದಿ ಯಾತ್ರಾ ಸ್ಥಳಗಳಿಗೆ ಪ್ರಯಾಣಿಕರು ಮುಕ್ತಿ ಗೊಂಡ ದಿನ ದೀಪಾವಳಿಯಾಗಿ ಆಚರಿಸುತ್ತಾರೆ. ಸೂರ್ಯನಿಗೆ ಅರ್ಘ್ಯ ಕೊಡುವುದು, ಗ್ರಹಣ ಸ್ನಾನ, ಶವಪೂಜೆ ಇವೆಲ್ಲಾ ನಿಷೇಧಿಸಲ್ಪಟ್ಟಿವೆ

ಜೈನ ಧರ್ಮದ ಪ್ರಕಾರ ಪ್ರತಿಯೊಂದು ಜೀವಿಗೂ ತನ್ನದೇ ಆದ ಭವಾವಳಿ ಇರುತ್ತದೆ ; ಸಿಕ್ಕು ಸಿಕ್ಕಾಗಿರುವ ಈ ಭವಾವಳಿಗಳು, ತೊಡರಾಗಿರುವ ಈ ಸಂಸಾರದ ಪ್ರತಿಬಿಂಬ ; ಓದುವವರಿಗೆ ಹುಟ್ಟು ಸಾವುಗಳ ಬಗ್ಗೆ ಬೇಸರ ಹುಟ್ಟಿ ಮುಕ್ತಿಯ ಕಡೆಗೆ ಮನಸ್ಸು ಹರಿಯುವಂತೆ ಮಾಡುತ್ತದೆ. ತೀರ್ಥಂಕರರಾದವರಿಗೆ ಪಂಚ ಕಲ್ಯಾಣಗಳು ನಡೆಯುತ್ತದೆ.

1 ಗರ್ಭಾವತರಣ ಕಲ್ಯಾಣ, 2 ಪರಿನಿಷ್ಕ್ರಮಣ ಕಲ್ಯಾಣ, 3 ಜನ್ಮಾಭಿಷೇಕ ಕಲ್ಯಾಣ, 4 ಕೇವಲ ಜ್ಞಾನ ಕಲ್ಯಾಣ, 5 ಪರಿನಿರ್ವಾಣ ಕಲ್ಯಾಣ.

ಜೈನ ಧರ್ಮೋಸ್ತು ಮಂಗಲಂ

ಪ್ರಮುಖ ವರ್ತಮಾನಗಳು

ನವದೆಹಲಿ— ಬೀಹಾರು ಶಾಸನಸಭೆಯನ್ನು ವಿಸರ್ಜಿಸುವ ಅಥವಾ ಚುನಾವಣೆ ವರೆಗೆ ಸ್ಥಗಿತ ಮಾಡುವ ವಿಷಯವಿಲ್ಲವೆಂದು ರಾಜ್ಯಸಭೆಯಲ್ಲಿ ತಿಳಿಸಲಾಯ್ತು

ಮೈಸೂರು— ಕೆಂಪುನಂಜಂಬಾ ಆಗ್ರಹಾರದಲ್ಲಿ ಅನೀತಿ ವರ್ತನೆ ನಡೆಸುತ್ತಿದ್ದ ಆಪಾದನೆಗಾಗಿ 13 ಹುಡುಗಿಯರಿಗೆ ತಲಾ ರೂ. 25 ಜುಲ್ಮಾನೆ ವಿಧಿಸಲಾಯ್ತು

ನವದೆಹಲಿ— ರಾಜ್ಯಸಭೆಯಲ್ಲಿ ಶ್ರೀ ಭೂಪೇಶಗುಪ್ತರು, 3 ಗೌರ್ನರರು ಅಂದರೆ ಶ್ರೀ ನಿತ್ಯಾನಂದ ಕಾನುಗೂ, ಶ್ರೀ ಕೆ. ಹಾ ಮತ್ತು ಶ್ರೀ ಮೋಹನಲಾಲ್ ಸುಖಾಡಿಯರವರು ಕಳ್ಳಸಾಗಾಣಿಕೆಗಾರ ಸಂಬಂಧ ಹೊಂದಿದ್ದಾರೆಂದು ಆಪಾದಿಸಿದಾಗ ಸಭೆಯಲ್ಲಿ ಸ್ವಲ್ಪ ಗಲಾಟೆಯಾಯಿತು

ರಾಜಕೋಟೆಯಿಂದ ಬಂದಿರುವ ಹೃದಯವಿದ್ರಾವಕ ವಾರ್ತೆ ಒಬ್ಬನು 3 ಗಂಟೆ ರಾತ್ರಿಯಲ್ಲಿ ಬೀಡಿ ಸೇದುತ್ತಾ ತನ್ನ ಕೊಠಡಿಯಲ್ಲಿ ಸುಳಿದಾಡುತ್ತಿದ್ದಾಗ ಅಲ್ಲಿದ್ದ ಕೈಚಾಂದ್ರಕ್ಕೆ ತಗುಲಿ ಅವನ ಹೆಂಡತಿ ಹಾಸಿಗೆ ತಗುಲಿತು ; ಹಾಸಿಗೆಗೆ ಬೆಂಕಿ ಹತ್ತಿ ಅತಳ ಮೈಯೆಲ್ಲಾ ಸುಟ್ಟು ಆಸ್ಪತ್ರೆಗೆ ಸಾಗಿಸಲ್ಪಟ್ಟು ಅಲ್ಲಿ ಸತ್ತಳು.

(2)

ಭಗವಾನ್ ಮಹಾವೀರರ 2500 ನೇ ನಿರ್ವಾಣ ಮಹೋತ್ಸವ

ಇಂದು ಭಗವಾನ್ ಮಹಾವೀರರ 2500 ನೇ ನಿರ್ವಾಣ ದಿನ ಇಂದಿನಿಂದ ರಾಷ್ಟ್ರಾದ್ಯಂತ ಒಂದು ವರ್ಷ ಕಾಲ ನಡೆಯಲಿರುವ ಉತ್ಸವದಲ್ಲಿ ಮೈಸೂರು ನಗರ ಭಕ್ತಿಯಿಂದ ಪಾಲ್ಗೊಳ್ಳುತ್ತದೆ. ಭಗವಾನ್ ಮಹಾವೀರರಿಗೆ ನಮನ

★ ಈ ಮಹೋತ್ಸವದ ಅಂಗವಾಗಿ ಇಂದಿನಿಂದ ನವೆಂಬರ್ 24 ರ ವರೆಗೆ ಮೈಸೂರು ನಗರದಲ್ಲಿ ನಡೆಯಲಿರುವ ಕಾರ್ಯಕ್ರಮಗಳು ಶಿಕ್ಷಣ ಸಚಿವ ಶ್ರೀ ಎಂ ಮಲ್ಲಿಕಾರ್ಜುನಸ್ವಾಮಿ ಅವರ ಉದ್ಘಾಟನೆಯೊಂದಿಗೆ ಬೆಳಗ್ಗೆ ಪ್ರಾರಂಭವಾಯಿತು.

★ ಉತ್ಸವದ ಅಂಗವಾಗಿ ಜೈನ್ ಬೋರ್ಡಿಂಗ್ ಹೌಸ್‌ನಲ್ಲಿರುವ ಮಹಾವೀರ ಮಂಟಪದಲ್ಲಿ ಪ್ರತಿದಿನ ಬೆಳಗ್ಗೆ ಮತ್ತು ಸಂಜೆ ಪ್ರವಚನ ಹಾಗೂ ಸಂಗೀತ ಮತ್ತಿತರ ಕಾರ್ಯಕ್ರಮಗಳು ನಡೆಯುವುವು

★ ನವೆಂಬರ್ 15 ರಂದು ಮಧ್ಯಾಹ್ನ 3 ಗಂಟೆಗೆ ಭಗವಾನ್ ಮಹಾವೀರ ಸ್ವಾಮಿಯವರ ಉತ್ಸವ ಪುರಭವನದಿಂದ ಹೊರಟು ಹಳೇ ಸ್ಯಾಚು ಸರ್ಕಲ್, ಕೆ. ಆರ್ ಸರ್ಕಲ್, ಸಯ್ಯಾಜಿರಾವ್ ರಸ್ತೆ, ಇರ್ವಿನ್ ರಸ್ತೆ, ಅಶೋಕ ರಸ್ತೆ ಮೂಲಕ ಪುರಭವನವನ್ನು ಸೇರುತ್ತದೆ.

★ ನವೆಂಬರ್ 18 ರಂದು ಸಂಜೆ 5-30 ಕ್ಕೆ ರಾಜ್ಯದ ರಾಜ್ಯಪಾಲರಾದ ಶ್ರೀ ಮೋಹನಲಾಲ್ ಸುಖಾಡಿಯವರು ಮಹಾವೀರರ ಜೀವನ ಸಂದೇಶ ಕುರಿತು ಉಪನ್ಯಾಸ ನೀಡುತ್ತಾರೆ. ಉಪಕುಲಪತಿ ಪ್ರೊ|| ಡಿ. ಜವರೇಗೌಡ ಅವರು ಅಧ್ಯಕ್ಷತೆ ವಹಿಸುವರು.

★ ಶ್ರವಣಬೆಳಗೊಳದ ಸ್ವಸ್ತಿಶ್ರೀ ಚಾರುಕೀರ್ತಿ ಪಂಡಿತಾಚಾರ್ಯ ಮಹಾಸ್ವಾಮಿಗಳವರು ನವೆಂಬರ್ 21 ರಂದು ಸಂಜೆ 6 ಗಂಟೆಗೆ ಪುರಭವನದಲ್ಲಿ ಆಶೀರ್ವಚನ ನೀಡುವರು.

★ ನವೆಂಬರ್ 24 ರಂದು ಸಂಜೆ 6-30 ಕ್ಕೆ ಶ್ರೀ ಜಿ ಪಿ ರಾಜರತ್ನಂ ಅವರು ಮಹಾವೀರರನ್ನು ಕುರಿತು ವಿಶೇಷ ಪ್ರವಚನ ನೀಡುವರು. ಮಹಾವೀರ ಮಂಟಪದಲ್ಲಿ ನಡೆಯುವ ಈ ಸಭೆ ಅಧ್ಯಕ್ಷತೆಯನ್ನು ಮೈಸೂರು ಜಿಲ್ಲಾಧಿಕಾರಿ ಶ್ರೀ ಎಂ. ಆರ್ಯಮಿತ್ರ ಅವರು ವಹಿಸುವರು.

★ ಇದೇ ಸಂದರ್ಭದಲ್ಲಿ ಹಳ್ಳದಕೇರಿಯಲ್ಲಿರುವ ಎಸ್ ಎಸ್ ಜೈನ ಧರ್ಮಶಾಲೆಯಲ್ಲಿ ನವೆಂಬರ್ 13 ರಿಂದ 21 ರ ವರೆಗೆ ಸಮವಸರಣ ರಚನೆ ಮತ್ತು ವಸ್ತು ಪ್ರದರ್ಶನವನ್ನು ಏರ್ಪಡಿಸಲಾಗಿದ್ದು, ಪ್ರತಿ ದಿನ ಮಧ್ಯಾಹ್ನ 3 ರಿಂದ ಸಂಜೆ 7 ರ ವರೆಗೆ ತೆರೆದಿರುತ್ತದೆ

ಈ ಕಾರ್ಯಕ್ರಮಗಳಲ್ಲಿ ಸಾರ್ವಜನಿಕರು ಭಾಗವಹಿಸಿ ತಮ್ಮ ಸಹಕಾರ ನೀಡಬೇಕೆಂದು ಕೋರುವ,

ಭಗವಾನ್ ಮಹಾವೀರರ 2500 ನೇ ನಿರ್ವಾಣ ಮಹೋತ್ಸವ ಸಮಿತಿ,
ಮೈಸೂರು ಜಿಲ್ಲೆ, ಮೈಸೂರು.

---

ad venture ಕಾರ್ಯಾಲಯ : ಎಸ್. ಎಸ್ ಧರ್ಮಶಾಲೆ, ಹಳ್ಳದಕೇರಿ, ಮೈಸೂರು. ಫೋನ್ : 22661

ಆಸ್ತಾದನೆ

ಭುವನೇಶ್ವರ— ಬೀಹಾರಿನಲ್ಲಿ ಜಯಪ್ರಕಾಶರ ಚಳುವಳಿ ವಿರುದ್ಧ ಪಾಟ್ನಾದಲ್ಲಿ ಸೋಮವಾರ ಪ್ರದರ್ಶನ ನಡೆಸಲು ಕಮ್ಯೂನಿಸ್ಟ್ ಪಾರ್ಟಿಯು ಕಾಂಗ್ರೆಸ್ಸಿನಿಂದ ರೂ 25 ಲಕ್ಷ ಪಡೆಯಿತೆಂದು ಮಾರಕ್ಸಿಸ್ಟ್ ನಾಯಕ ಶ್ರೀ ಜ್ಯೋತಿ ಬಸುರವರು, ಇಲ್ಲಿ ಒರಿಸ್ಸಾ ಪರಕಾರದ ಆಹಾರ ನೀತಿ ಪ್ರತಿಭಟಿಸಲು ಏರ್ಪಡಿಸಲಾಗಿದ್ದ ಭಾರಿ ಸಭೆಯಲ್ಲಿ ಮಾಡಿದ ಭಾಷಣದಲ್ಲಿ ಹೇಳಿದರು

ಲಕ್ಷಗಟ್ಟಲೆ ಜನರು ನಿರುದ್ಯೋಗಿಗಳಾದರು

ಹೈದರಾಬಾದು ಆಂಧ್ರ ಪ್ರದೇಶದಲ್ಲಿರೂ 9 ಕೋಟಿಗಳಷ್ಟು ಬೆಲೆಯ ಕೈಮಗ್ಗ ಬಟ್ಟೆ ರಾಶಿ ಬಿದ್ದಿದ್ದು, ಲಕ್ಷಾಂತರ ಕೆಲಸಗಾರರು ನಿರುದ್ಯೋಗಿಗಳಾಡಿದು.

ಕಮ್ಯುನಿಸ್ಟ್ ಪಾರ್ಟಿ ಏರ್ಪಡಿಸಿದ್ದು

ಪಾಟ್ನಾ— ಬೀಹಾರು ರಾಜ್ಯದ "ಪಾರ್ಲಿಮೆಂಟರೀತಿ ಪ್ರಜಾರಾಜ್ಯವನ್ನು ಎತ್ತಿ ಹಿಡಿಯಲೂ" ಮತ್ತು ಶ್ರೀ ಜಯಪ್ರಕಾಶರವರ ಚಳವಳಿಯನ್ನು ವಿರೋಧಿಸಲೂ ಸೋಮವಾರ ಕಮ್ಯೂನಿಸ್ಟ್ ಪಾರ್ಟಿ ಭಾರಿ ಮೆರವಣಿಗೆ ನಡೆಸಿ, ಪ್ರಾಮೂಹಿಕ ಮೇಳನ ನಡೆಸಿತು ; ಅದರ ನಿಯೋಗ ಗೌರ್ನರರಿಗೆ ಮನವಿ ಪತ್ರ ಅರ್ಪಿಸಿತು — ಇದರ ವಿರುದ್ಧವಾಗಿ ಚಳವಳಿಗಾರರು ಜಯಪ್ರಕಾಶರ ನೇತೃತ್ವದಲ್ಲಿ ಮೆರವಣಿಗೆ ನಡೆಸಿ ಕರಾಳ ದಿನ ಆಚರಿಸಿದರು ; ಅನೇಕರು ಕಪ್ಪು ಬ್ಯಾಡ್ಜು ಧರಿಸಿದ್ದರು

ವಾಕ್ಫ್ ನಿಧಿಯಿಂದ

ಬೆಂಗಳೂರು— ಮುಂದಿನ ವಿದ್ಯಾಭ್ಯಾಸದ ವರ್ಷದಿಂದ ರಾಜ್ಯದ ಪ್ರತಿ ಜಿಲ್ಲೆಯಲ್ಲೂ 3 4 ವಿದ್ಯಾರ್ಥಿ ವೇತನಗಳನ್ನು ವಾಕ್ಫ್ ನಿಧಿಯಿಂದ ಕೊಡಲಾಗುವುದೆಂದು ಮಂತ್ರಿ ಶ್ರೀ ಯಾಹ್ಯಾರವರು ಉರ್ದು ಸ್ಕೂಲು ಕಟ್ಟಡವನ್ನು ಉದ್ಘಾಟಿಸುತ್ತಾ ಹೇಳಿದರು

ಕಡಿಯಲ್ಪಟ್ಟ ಕಿವಿ ಹೊಲಿಯಲಾಯ್ತು

ಬರ್ಮಿ— ಟಾಸ್ಮಿಯಾದ ಬೂರ್ನಿಯಾದಲ್ಲಿ ಒಂದು ಕುದುರೆ ಹಾಕಿದ ಮರಿಯನ್ನು 19 ವರ್ಷದ ಮಹಿಳೆ ಶ್ರೀಮತಿ ಬ್ರಾಂಡ್ ಮುಟ್ಟಿದಾಗ ಕುದುರೆ ಆವಳ ಕಿವಿಯನ್ನು ಕಡಿದುಹಾಕಿತು — ಅಲ್ಲೇ ಇದ್ದ ಆವಳ ಗಂಡ ಕುದುರೆಯನ್ನು ದೂರ ಅಟ್ಟಿ, ಕೆಳಗೆ ಬಿದ್ದಿದ್ದ ಕಿವಿಯೊಡನೆ ಹೆಂಡತಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋದನು — ಡಾಕ್ಟರರು ಕಿವಿಯನ್ನು ಮೊದಲಿನಂತೆ ಇಟ್ಟು ಹೊಲಿದರು

ವುಡ್‌ಲಾಂಡ್ 8 11 74 ರಿಂದ
ಅ ಜ ನಾ ಬಿ

ಅ ಪೆ ರಾ 15 11 74 ರಿಂದ
ಜುಮೊನ ಆಸ್‌ಮಾನ್

Help The Gorakshana
— Humanitarian Propoganda Monthly....
ಭಾರತದಲ್ಲಿ ಗೋವಧೆ
ಪೂರ್ಣ ನಿಷೇಧವಾಗಲಿ

Edited Printed and Published by Dharmapracharanirata M S. Krishna Rao (Proprietor) at the Satyavadi Press, Chamarajapuram Mysore